# ಕಲಿಯುಗದ ಕಲ್ಪತರು

# ಮಂತ್ರಾಲಯ

# ಶ್ರೀ ರಾಘವೇಂದ್ರ ಪ್ರಭುಗಳು

## ಭಾಗ-೨

## ಅಗಮ್ಯಮಹಿಮರು

ಮೊದಲನೆಯ ಭಾಗದಲ್ಲಿ ಇವರು ಅವತಾರಿ ಪುರುಷರು, ದೇವಾಂಶರು ಎಂಬ ಸ್ವಲ್ಪ ವಿಚಾರ ಮಾಡಿದೆವು. ಈ ಭಾಗದಲ್ಲಿ, ಅವರು ಶ್ರೀ ರಾಘವೇಂದ್ರ ಗುರುಗಳಾಗಿ ಅವತಾರ ಮಾಡಿದಾಗ ಅವರನ್ನು ಭಕ್ತಾದಿಗಳಿಗೆ ಪರಿಚಯ ಮಾಡಿಸಕೊಡತಕ್ಕಂತಹ ಗ್ರಂಥಗಳ ಬಗ್ಗೆ ಸ್ವಲ್ಪ ವಿಚಾರ ಮಾಡುವಾ.

ಆಕಾರ ಗ್ರಂಥಗಳೆಂದರೆ ಈ ಕೆಳಗಿನ ನಾಲ್ಕು:

| ಸಂಖ್ಯೆ | ಗ್ರಂಥ | ಗ್ರಂಥಕರ್ತರು | ಭಾಷೆ |
|---|---|---|---|
| ೧. | ಶ್ರೀ ರಾಘವೇಂದ್ರ ವಿಜಯ | ಶ್ರೀ ನಾರಾಯಣಾಚಾರ್ಯರು | ಸಂಸ್ಕೃತ |
| ೨. | ಶ್ರೀ ರಾಘವೇಂದ್ರ ಸ್ತೋತ್ರ | ಶ್ರೀ ಅಪಣ್ಣಾಚಾರ್ಯರು | ಸಂಸ್ಕೃತ |
| ೩. | ಶ್ರೀ ಗುರುಗುಣಸ್ತವನ | ಶ್ರೀ ವಾದೀಂದ್ರ ತೀರ್ಥರು | ಸಂಸ್ಕೃತ |
| ೪. | ಶ್ರೀ ರಾಘವೇಂದ್ರ ತಂತ್ರ | ಶ್ರೀ ಕೃಷ್ಣಾವಧೂತರು | ಸಂಸ್ಕೃತ |

ಇವಿಗಳಲ್ಲಿ ಮೊದಲನೆಯ ಹತ್ತು ಸರ್ಗದ ಕಾವ್ಯ. ಚರಿತ್ರ ರೂಪದಲ್ಲಿದೆ. ಎರಡನೆಯದು ಸರ್ವತೋಮುಖ ಮಹಿಮೋಪೇತ ವ್ಯಕ್ತಿ ಪರಿಚಯ. ಈ ಸ್ತೋತ್ರವು ಗುರುಸಾರ್ವಭೌಮರಿಂದ (ಬೃಂದಾವನದಿಂದ ಹೊರಟ ಧ್ವನಿಯಿಂದ) ಅನುಮೋದಿತವಾಗಿದೆ. ಇದು ಕೇವಲ ಸ್ತೋತ್ರವಲ್ಲ ಮಂತ್ರ. ಮೂರನೆಯ ಕೃತಿ ಅವರ ಗ್ರಂಥ ರಚನ ಪ್ರಶಂಸನಾ ಪೂರ್ವಕ ಅವರ ವ್ಯಕ್ತಿತ್ವವನ್ನು ತಿಳಿಸುವ ಶ್ರೀ ವಾದೀಂದ್ರ ತೀರ್ಥ ವಿರಚಿತ “ಗುರುಗುಣ ಸ್ತವನ” ನಾಲ್ಕನೆಯದು ಶ್ರೀ ಕೃಷ್ಣಾವಧೂತರಿಂದ ರಚಿತವಾದ “ಶ್ರೀ ರಾಘವೇಂದ್ರ ತಂತ್ರ” ಹದಿನೈದು ಅಧ್ಯಾಯೋಪೇತ ಸ್ತೋತ್ರ ಸಮೂಹ. ವಿವಿಧ ಛಂದೋವೃತ್ತಗಳಿಂದ ರಚಿತವಾದ ಈ ಸ್ತೋತ್ರವನ್ನು ಬೇಸರವಿಲ್ಲದೆ ಸರಾಗವಾಗಿ ಪಠಿಸಬಹುದು. ಶ್ರೀ ರಾಯರ ಮಹಿಮೆಯನ್ನು ಪೂಜಾಕ್ರಮವನ್ನು ಹೇಳಿದ್ದಾರೆ. ಇದರಲ್ಲಿ ಶ್ರೀ ರಾಘವೇಂದ್ರ ಸಹಸ್ರನಾಮವಿದೆ. ಈ ನಾಲ್ಕು ಗ್ರಂಥಗಳೂ ಸಂಸ್ಕೃತ ಭಾಷೆಯಲ್ಲಿವೆ.

ಶ್ರೀ ರಾಘವೇಂದ್ರ ಗುರುಗಳು ಜನ ಸಾಮಾನ್ಯರ ದೃಷ್ಟಿಗೆ ಈಗ ಕಾಣುವುದಿಲ್ಲ. ಮೇಲಿನ ನಾಲ್ಕು ಸುಲೋಚನಗಳು ಶ್ರೀ ಗುರುರಾಜರ ಪರೋಕ್ಷ ಮತ್ತು ಅಪರೋಕ್ಷ ಜ್ಞಾನ ಪಡೆಯಲು ಭಕ್ತರಿಗೆ ಸಹಾಯವಾಗುವವು.

ಇವರುಗಳಲ್ಲಿ ಎರಡನೆಯ ಸುಲೋಚನ ಶ್ರೀ ಅಪಣ್ಣಾಚಾರ್ಯರು ಮಾಡಿಕೊಟ್ಟದ್ದು. ಅವರು ಗುರುಗಳ ಸಾಕ್ಷಾತ್ ಅತಿಶಯ ಪ್ರೀತಿಯ ಶಿಷ್ಯರು. ಅವರಲ್ಲಿ ಪಾಠ ಓದಿದವರು ಪ್ರವಚನ ಕೇಳಿದವರು. ವಾದ ಸಭೆಗಳಲ್ಲಿ ಗುರುರಾಜರ

ವಾಗ್ವೈಖರಿ ಮೆಚ್ಚಿದವರು. ವಿಜಯಭೇರಿ ಹೊಡೆಸಿದ ಗುರುಗಳನ್ನು ನೋಡಿ ಮನಸಾರೆ ತಣಿದವರು, ಅವರ ಯೋಗ್ಯ ಪ್ರಭಾವ ಮಹಿಮೆಗಳನ್ನು ನೋಡಿ ಆಶ್ಚರ್ಯಪಟ್ಟವರು. ಅವರ ಗ್ರಂಥ ರಚನಾಕೌಶಲವನ್ನು ನೋಡಿ ತಲೆದೂಗಿದವರು ಮತ್ತು ಅವರನ್ನು ನೋಡಿ ಮಹಿಮಾತಿಶಯಗಳನ್ನು ಮನನ ಮಾಡಿಕೊಂಡು ರಚಿಸಿದ ಸ್ತೋತ್ರ. ಕೊನೆಯ ಶ್ಲೋಕದ ಕೊನೆಯ ಪದಗಳು "ಸಾಕ್ಷೀ ಹಯಾಸ್ಯೋತ್ರ ಹಿ" ಎಂಬುದು ಗುರುಗಳ ಧ್ವನಿಯಿಂದ ಶ್ಲೋಕ ಪೂರ್ತಿಗೊಂಡಿತು. ಈ ಸ್ತೋತ್ರದಲ್ಲಿ ಅತಿಶಯೋಕ್ತಿಯಾಗಲೀ, ವ್ಯರ್ಥ ವಿಶೇಶಣಗಳಾಗಲಿ ಅಥವ ಉತ್ಪ್ರೇಕ್ಷೆಯಾಗಲಿ ಇಲ್ಲವೆಂಬುದಕ್ಕೆ ಮತ್ತು ಭಕ್ತರ ಅನಿಷ್ಟ ನಿವೃತ್ತಿ ದ್ವಾರಾ ಅಭೀಷ್ಟಗಳನ್ನು ಈಡೇರಿಸಿ ಕೊಡುವ ಭರವಸೆ ರೂಪವಾಗಿಯೂ ಇದೆ ಈ ಸ್ತೋತ್ರ. ಹಲವು ಮಾತೇನು ! ತಾವು ಈ ಸ್ತೋತ್ರದಲ್ಲಿ ಉಕ್ತವಾದ ಎಲ್ಲವನ್ನೂ ಮಡುವೆವೆಂಬುದಕ್ಕೆ ಶ್ರೀ ಹಯಗ್ರೀವದೇವರೇ ಸಾಕ್ಷೀ ಎಂದರು. ಶ್ರೀ ಅಪಣ್ಣಾಚಾರ್ಯರು ರಚಿಸಿದ ಈ ಸ್ತೋತ್ರದಲ್ಲಿ ಶ್ರೀ ರಾಯರ ಮಹಿಮೆ ಘನೀಭೂತವಾಗಿದೆ. ಈ ಭವ್ಯವಾದ ಈ ಸ್ತೋತ್ರರೂಪ ಸುಲೋಚನದಿಂದ ಶ್ರೀ ರಾಘವೇಂದ್ರ ಗುರುಗಳು ನಮ್ಮ ಮನಸ್ಸಿನ ತೆರೆಯ ಮೇಲೆ ಹೇಗೆ ಕಾಣುವರೆಂಬುದು ಸ್ವಲ್ಪ ನೋಡುವಾ. ಅಂದರೆ ಅವರ ಪರಿಚಯವಾಗುವುದು. ಈ ಸ್ತೋತ್ರವನ್ನು ಐದು ಭಾಗಗಳಲ್ಲಿ ನೋಡಬಹುದು.

**(೧) ಗುರುಗಳ ಸ್ವರೂಪ**

| | |
|---|---|
| ೧ ಭವ್ಯ ಸ್ವರೂಪೋ | ಮಂಗಳಕರವಾದ ನಯನಾನಂದ ಉಂಟುಮಾಡತಕ್ಕ ಸ್ವರೂಪ ಉಳ್ಳವರು |
| ೨ ನಿರಸ್ತ ದೋಷೋ ನಿರವದ್ಯವೇಷಃ | ರಾಗಾದಿದೋಷಗಳಿಂದ ರಹಿತರು. ನಿರ್ದುಷ್ಟವಾದ ಪವಿತ್ರವಾದ ಆಕಾರ ಉಳ್ಳವರು |
| ೩ ದಿವಿಜದ್ರುಮೋಯಂ | ಕಲಿಯುಗದ ಕಲ್ಪತರು |
| ೪ ವಿದ್ವತ್ಪರಿಜ್ಞೇಯ ಮಹಾವಿಶೇಷಃ | ಮಹಾಜ್ಞಾನಿಗಳಿಂದಲೇ ತಿಳಿದುಕೊಳ್ಳಲು ಯೋಗ್ಯವಾದ ಮಹಿಮಾತಿಶಯರು |
| ೫ ಪ್ರತ್ಯರ್ಥಿಮೂಕತ್ವ ನಿದಾನಭಾಷಃ | ಪ್ರತಿವಾದಿಗಳನ್ನು ತಮ್ಮ ವಾಕ್ಯದಿಂದ ನಿರುತ್ತರ ಮಾಡತಕ್ಕವರು |

**(೨) ಭಗವತ್ಸಾಕ್ಷಾತ್ಕಾರ ಮತ್ತು ಪುಣ್ಯ ಸಂಚಯ:**

| | |
|---|---|
| ೧ ಅಪರೋಕ್ಷಿಕೃತ ಶ್ರೀಶಃ ಸಮುಪೇಕ್ಷಿತ ಭಾವಜಃ | ಶ್ರೀಪತಿಯನ್ನು ಅಪರೋಕ್ಷೀಕರಿಸಿಕೊಂಡರು ಮತ್ತು ಕಾಮಾದಿಗಳನ್ನು ಗೆದ್ದವರು |

| | |
|---|---|
| ೨ಹರಿಪಾದಕಂಜನಿಷೇಣಾ- ಲಬ್ಧ ಸಮಸ್ತ ಸಂಪದಃ | ಶ್ರೀಹರಿಯನ್ನು ಆರಾಧನಾ ಉಪಾಸನಾ ಮಾಡುವದರಿಂದ ಭಗವತ್ಪ್ರಸಾದ ಸಕಲ ಸಂಪತ್ತನ್ನು ಹೊಂದಿದವರು (ಪುಣ್ಯರೂಪದಲ್ಲಿ) |

**(೩) ಗುರುಗಳ ಅನುಗ್ರಹ ಅನಿಷ್ಟ ನಿವೃತ್ತಿ ರೂಪ**

| | |
|---|---|
| ೧ ಅಘಾದ್ರಿ ಸಂಭೇದನ ದೃಷ್ಟಿವಜ್ರಃ | ಪಾಪವೆಂಬ ಪರ್ವತವನ್ನು ಧ್ವಂಸ ಮಾಡಲಿಕ್ಕೆ ತಮ್ಮ ದೃಷ್ಟಿಯೇ ವಜ್ರಾಯುಧವಾಗಿ ಉಳ್ಳವರು |
| ೨ ಭವದುಃಖ ತೂಲ ಸಂಘಾಗ್ನಿಚರ್ಯಃ | ಸಾಂಸಾರಿಕ ದುಃಖವೆಂಬ ಹತ್ತಿಯ ರಾಶಿಗೆ ಅಗ್ನಿ ಸದೃಶರು. |
| ೩ ಸಮಸ್ತ ದುಷ್ಟಗ್ರಹ ನಿಗ್ರಹೇಶಃ | ಪಿಶಾಚಂದಿ ದುಷ್ಟಗ್ರಹಗಳನ್ನು ನಿಗ್ರಹ ಮಾಡುವುದರಲ್ಲಿ ಮಹಾ ಸಮರ್ಥರು |
| ೪ ದುರತ್ಯಯೋಪ ಪ್ಲವ ಸಿಂಧುಸೇತುಃ | ದಾಟಲಸಾಧ್ಯವಾದ ಸಂಸಾರ ಸಿಂಧುವಿಗೆ ಸೇತುವೆಯಂತೆ ಇರುವವರು |
| ೫ ದುಸ್ತಪತ್ರಯ ನಾಶನೋ | ತ್ರಿವಿಧ ತಾಪತ್ರಯಗಳನ್ನು ದೂರ ಮಾಡುವವರು |
| ೬ ಗ್ರಹಮಹಾ ಪಾಪಾಪಹಃ | ಸಾಕಿನೀ ಮೊದಲಾದ ಗ್ರಹಗಳಿಂದಲೂ ಬ್ರಹ್ಮಹತ್ಯಾದಿ ಪಾಪಗಳಿಂದಲೂ ರಕ್ಷಿಸತಕ್ಕವರು |
| ೭ ಅಜ್ಞಾನ ವಿಸ್ಮೃತಿ ಭ್ರಾಂತಿಸಂಶಯಾಪಸ್ಮೃತಿ ಕ್ಷಯ \| ತಂದ್ರಾಕಂಪವಚಃ ಕೌಂಠೇ ಮುಖಾಯೇ ಚೇಂದ್ರಿಯೋದ್ಭವಾ ದೋಷಾಸ್ತೇನಾಶಮಾಯಾಂತಿ.. \| | ಅಜ್ಞಾನ, ವಿಸ್ಮರಣೆ, ಅನ್ಯಥಾ ಜ್ಞಾನ, ಸಂಶಯ, ಮಲರೋಗ, ತೊದಲುವದು ಇತ್ಯಾದಿ ದೋಷಗಳು ನಾಶವಾಗುತ್ತದೆ. |
| ೮ ಹಂತುನಃ ಕಾಯಜಾನ್ | ಕಾಯಿಕ ದೋಷಗಳು ಮತ್ತು |

| | |
|---|---|
| ದೋಷಾನ್ ಆತ್ಮಾತ್ಮೀಯ ಸಮುದ್ಭವಾನ್ | ಮಾನಸಿಕ ದೋಷಗಳು ಅಧಿ ವ್ಯಾಧಿ ದೂರ ಮಾಡತಕ್ಕವರು |
| ೯ ಶರೀರಸ್ಥ ಸಮಸ್ತ ದೋಷಾನ್ ಹತ್ವಾಸನೋ ಅವತು \| | ಶರೀರದಲ್ಲಿರತಕ್ಕ ಸಮಸ್ತ ದೋಷಗಳನ್ನು ಹೋಗಲಾಡಿಸಿ ರಕ್ಷಿಸಲಿ |
| ೧೦ ಭಯಾಪಹಃ | ಭಯವನ್ನು ದೂರ ಮಾಡುವವರು |
| ೧೧ ಯತ್ಪಾದಕಂಜರಜಸಾ ಪರಿಭೂಷಿತಾಂಗಾ \| | ಇಲ್ಲಿ ಮೃತ್ತಿಕೆಯ ಮಹಿಮೆಯನ್ನು ಸ್ಮರಿಸಿ ಕೊಳ್ಳಬಹುದು |
| ೧೨ ಇತ್ಯಾದಿ.....೧ | ಆದಿಸದದಿಂದ ಆಶೇಷ ಅನಿಷ್ಟಗಳನ್ನು ಇಲ್ಲಿ ಹೇಳಲಾಗುವದಿಲ್ಲ. ಇಲ್ಲಿ ಹೇಳಿದ್ದಲ್ಲದೇ ಇನ್ನೆಂಥ ಅನಿಷ್ಟಗಳನ್ನು ನಿವಾರಣೆ ಮಾಡಲು ಗುರುಗಳು ಸಾಮರ್ಥರಿದ್ದಾರೆ |

**೪) ಗುರುಗಳ ಅನುಗ್ರಹ ಇಷ್ಟಪ್ರಾಪ್ತಿ ರೂಪ**

| | |
|---|---|
| ೧ ಶ್ರೀ ರಾಘವೇಂದ್ರೋ ಸಕಲಪ್ರದಾತಾ \| ಸ್ವಪಾದಕಂಜ ಧ್ವಯ ಭಕ್ತಿಮಧ್ಯಃ ‖ | ಶ್ರೀ ರಾಘವೇಂದ್ರರು ತಮ್ಮಲ್ಲಿ ಭಕ್ತಿ ಸಹಿತ ಪಾದಕಮಲ ಆರಾಧಕರಿಗೆ ಎಲ್ಲ ಅಭೀಷ್ಟಗಳನ್ನು ಕೊಡುತ್ತಾರೆ |
| ೨ ದೇವಸ್ವಭಾವೋ ದಿವಿಜದ್ರುಮೋಯಂ \| ಇಷ್ಟಪ್ರದೋ ಮೇ ಸತತಂ ಸಭೂಯಾತ್ ‖ | ದೇವಾಂಶರಾದ, ಕಲ್ಪವೃಕ್ಷಕ್ಕೆ ಸದೃಶರಾದ ಶ್ರೀ ರಾಘವೇಂದ್ರರು ಯಾವಾಗಲೂ ಇಚ್ಛಿತ ಫಲಗಳನ್ನು ಕೊಡುವವರಾಗಲಿ |
| ೩ ಸಂತಾನ ಸಂಪತ್ ಪರಿಶುದ್ಧ ಭಕ್ತಿವಿಜ್ಞಾನ \| ವಾಗ್ದೇಹ ಸುಪಾಟವಾದೀನ್ ದತ್ವಾ ‖ | ಸಂತಾನ, ಸಂಪತ್ತು, ಪರಿಶುದ್ಧ ಭಕ್ತಿ ವಿಜ್ಞಾನ ವಾಕ್, ದೇಹ ಸುಪಾಟವಾದೀನ್ ಇತ್ಯಾದಿಗಳನ್ನು ಕೊಡಲಿ |
| ೪ ಭುವಿ ಮಹಾವಂದ್ಯಾ ಸುಪುತ್ರಪ್ರದಃ ‖ | ಸಂತಾನ ಅಶೆಯಿಲ್ಲದ, ವೈದ್ಯರಿಂದಲೂ ಬಂಜೆಯೆಂದು |

| | |
|---|---|
| | ಕರೆಸಿ ಕೊಂಡು ಚಿಕಿತ್ಸೆಗೆ ಮೀರಿದವರಿಗೆ, ಸು ಪುತ್ರವನ್ನು ಕೊಟ್ಟವರು |
| ೫ ವ್ಯಂಗಸ್ವಂಗ ಸಮೃದ್ಧಿದಃ ॥ | ಅಂಗವಿಕಲರಿಗೆ ಪುಷ್ಟಿಯಾದ ಅಂಗಾಂಗಗಳನ್ನು ಕೊಟ್ಟವರು |
| ೬ ಸರ್ವತಂತ್ರ ಸ್ವತಂತ್ರೋಽಸೌ । ಶ್ರೀ ಮಧ್ವಮತ ವರ್ಧನಃ ॥ | ಮಧ್ವಮತವನ್ನು ಅಭಿವೃದ್ಧಿಗೊಳಿಸುವ ಕಾರ್ಯದಲ್ಲಿ ಸರ್ವತಂತ್ರ ಸ್ವತಂತ್ರರು |
| ೭ ಓಂ ಶ್ರೀ ರಾಘವೇಂದ್ರಾಯನಮಃ ಇತ್ಯಷ್ಟಾಕ್ಷರ ಮಂತ್ರತಃ । ಜಪಿತಾತ್ ಭಾವಿತಾಂ ನಿತ್ಯಂ ಇಷ್ಟಾರ್ಥಾಸ್ಸ್ಯುಃನ ಸಂಶಯಃ ॥ | ‘ಓಂ ಶ್ರೀ ರಾಘವೇಂದ್ರಾಯನಮಃ’ ಎಂಬ ಅಷ್ಟಾಕ್ಷರ ಮಂತ್ರ ಜಪ ಮಾಡುವದರಿಂದ ಸಕಲ ಇಷ್ಟಾರ್ಥಗಳೂ ನೆರವೇರುತ್ತವೆ |
| ೮ ಸರ್ವಾನಪಿ ಪುಮರ್ಥಾಂಶ್ಚದದಾತು । ಗುರುರಾತ್ಮವಿತ್ ॥ | ಪರರ ಮನೋಗತ ಅಭಿಪ್ರಾಯಗಳನ್ನು ತಿಳಿಯಲು ಸಮರ್ಥರಾದ ಗುರುಗಳು ಸಕಲ ಪುರುಷಾರ್ಥಗಳನ್ನು ಕೊಡಲಿ |
| ೯ ಇಹಮುತ್ರಾಪ್ತ ಸರ್ವೇಷ್ಟೋ ಮೋದತೆ । ನಾತ್ರ ಸಂಶಯಃ ॥ | ಇತರ ಅನುಗ್ರಹದಿಂದ ಇಹ ಲೋಕದಲ್ಲಿ ಪರಲೋಕದಲ್ಲಿ ಸಕಲ ಇಷ್ಟವೂ ಆನಂದವೂ ಲಭಿಸುತ್ತದೆ |
| ೧೦ ಸರ್ವ ಯಾತ್ರಾ ಫಲಾವಾಪ್ತ್ಯೈಯಥಾ ಶಕ್ತಿ ಪ್ರದಕ್ಷಿಣಮ್ ॥ | ಗುರುಗಳ ಬೃಂದಾವನ ಪ್ರದಕ್ಷಿಣೆಯಿಂದ ಸರ್ವ ಯಾತ್ರಫಲ ಲಭಿಸುತ್ತದೆ |
| ೧೧ ತವ ಬೃಂದಾವನ ಜಲಂ ಶಿರಸಾ ಧಾರಯಾಮ್ಯದ್ಯ ಸರ್ವತೀರ್ಥಫಲಾಪ್ತಯೇ ॥ | ಬೃಂದಾವನ ಅಭಿಷೇಕ ಮಾಡಿದ ಜಲ ಪಾನದಿಂದ ಪಾದೋದಕ ಸೇವನೆಯಿಂದ, ಶಿರಸ್ಸಿನಲ್ಲಿ ದಾರಣ ಮಾಡುವದರಿಂದ ಸರ್ವಯಾತ್ರಾಫಲ ಲಭಿಸಲಿ |
| ೧೨ ಸರ್ವಾಭಿಷ್ಟಾರ್ಥ | ಗುರುಗಳಿಗೆ ನಮಸ್ಕಾರ |

| | |
|---|---|
| ಸಿದ್ಧ್ಯರ್ಥಂ । ನಮಸ್ಕಾರಂ ಕರೋಮ್ಯಹಂ ॥ | ಮಾಡುವದರಿಂದ ಎಲ್ಲ ನಮ್ಮ ಅಭೀಷ್ಟಗಳು ಸಿದ್ಧಿಯಾಗಲಿ |
| ೧೩ ತವಸಂಕೀರ್ತನಂ ವೇದಶಾಸ್ತ್ರಾರ್ಥ ಜ್ಞಾನ ಸಿದ್ಧಯೇ ॥ | ಗುರುಗಳೇ ತಮ್ಮ ಮಹಿಮೋಪೇತವಾದ ಗುಣಗಳನ್ನು ಗಾನಮಾಡುತ್ತೇವೆ ನಮಗೆ ವೇದಗಳ ಮತ್ತು ಸಚ್ಛಾಸ್ತ್ರಗಳ ಜ್ಞಾನ ಲಭಿಸಲಿ |
| ೧೪ ಶಾಪಾನುಗ್ರಹ ಶಕ್ತೋಽನ್ಯೋ ರಾಘವೇದ್ರಾನ್ನವಿದ್ಯತೆ | ಶಾಪ ಮತ್ತು ಅನುಗ್ರಹ ಸಾಮರ್ಥ್ಯಗಳಲ್ಲಿ ಶ್ರೀ ರಾಘವೇಂದ್ರರ ಸಮ ಇನ್ನಾರಿಲ್ಲ |
| ೧೫ ಅಪೇಕ್ಷಿತ ಪ್ರದಾತಾನ್ಯೋ ರಾಘವೇಂದ್ರಾನ್ನ ವಿದ್ಯತೆ | ಭಕ್ತರ ಅಪೇಕ್ಷೆಗಳನ್ನು ಈಡೇರಿಸುವದರಲ್ಲಿ ಶ್ರೀ ರಾಘವೇಂದ್ರರ ಸಮ ಇನ್ನಾರಿಲ್ಲ. |
| ೧೬ ಅಗಮ್ಯ ಮಹಿಮಾಲೋಕೇ ರಾಘವೇಂದ್ರೋ ಮಹಾಯಶಃ ॥ | ಯಾವದೊಂದು ಸಂದಿಗ್ಧ ಪ್ರಸಂಗದಲ್ಲಿ ಮುಂದೆ ಗರುಗಳು ಏನು ಮಾಡುವವರು, ಏನಾಗುವದು ಎಂದು ತಿಳಿಯಲು-ಮಹಿಮಾ ವಿಶೇಷಗಳನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. (ಅವರು ಗಂಧ ತೇಯ್ದ ಸಂದರ್ಭ, ಪ್ರಾಣದಾನ ಮಾಡಿದ್ದು, ಮೃತ್ತಿಕಾ ಮಹಿಮೆ, ವಂಧ್ಯಗೆ ಪುತ್ರದಾನ, ಮಾಂಸವು ಫಲಪುಷ್ಪವಾದದ್ದು ಇವುಗಳನ್ನು ಸ್ಮರಿಸಬೇಕು) |
| ೧೭ ಸಂಸಾರೆ ಅಕ್ಷಯ ಸಾಗರೇ ಪ್ರಕೃತಿತೋ ಆಗಾಧೇ ಸದಾದುಸ್ತರೇ ॥ | ದಾಟಲಸಾಧ್ಯವಾದ ಭಯದಿಂದಕೂಡಿದ ಸಂಸಾರದಿಂದ ನಮ್ಮನ್ನು ಪಾರುಮಾಡಿರಿ |

**೫) ಗುರುರಾಜರ ಸ್ತೋತ್ರ ಮಹಿಮಾ**

೧೬೭೧ ಅಂದರೆ ಈ ವರ್ಷಕ್ಕೆ (೧೯೮೭) ೩೧೬ ವರ್ಷಗಳು ಆದವು ಗುರುಗಳು ಬೃಂದಾವನಸ್ಥರಾಗಿ. ಅವರು ಮಾನವದೃಷ್ಟಿಗೆ ಅಗೋಚರರಾದ ಮೇಲೆ ಭಕ್ತಾದಿಗಳಿಗೆ ಅವರ ಸ್ತೋತ್ರವೇ ಗತಿ. ನಮಗೆ ಸ್ತೋತ್ರದಲ್ಲಿರತಕ್ಕ ಮಹಿಮೆಯೇ ಸಾಕು. ಈಗ ಸ್ತೋತ್ರಗತ ಮಹಿಮಾ ನೋಡುವಾ,

| | |
|---|---|
| ೧ ರಾಘವೇಂದ್ರ ಗುರುಸ್ತೋತ್ರಂ ಯಃಪಠೇತ್ । ಭಕ್ತಿಪೂರ್ವಕಂ ತಸ್ಯ ಕುಷ್ಠಾದಿ ರೋಗಾಣಾಂ ನಿವೃತ್ತಿಸ್ತ್ವರಯಾ ಭವೇತ್ ॥ | ಶ್ರೀ ರಾಘವೇಂದ್ರ ಗುರು ಸ್ತೋತ್ರವನ್ನು ಭಕ್ತಿಪೂರ್ವಕ ಪಠಿಸುವದರಿಂದ ಕುಷ್ಠಾದಿ ರೋಗಗಳು ಶೀಘ್ರವಾಗಿ ನಾಶವಾಗುತ್ತದೆ |
| ೨ ಅಂಧೋಪಿ ದಿವ್ಯದೃಷ್ಟಿಃ ಸ್ಯಾತ್ ಏಡ ಮೂಕೋಪಿ ವಾಕ್ಪತಿಃ । ಪೂರ್ಣಾಯುಃ ಪೂರ್ಣಸಂಪತ್ತಿಃ ॥ | ಕುರುಡನಿಗೆ ಕಣ್ಣುಗಳು ಬರುವವು. ಹುಟ್ಟು ಮೂಕನು ಸಾಕಷ್ಟು ಮಾತನಾಡುತ್ತಾನೆ ಪೂರ್ಣಾಯು ಮತ್ತು ಪೂರ್ಣಾ ಸಂಪತ್ತನ್ನು ಹೊಂದುತ್ತಾನೆ |
| ೩ ಯಃ ಪಿಬೇಜ್ಜಲಮೇತೇನ ಸ್ತೋತ್ರೇಣೈವಾಭಿಮಂತ್ರಿತಂ। ತಸ್ಯಕುಕ್ಷಿ ಗತಾದೋಷಾ ಸರ್ವೇ ನಶ್ಯಂತಿ ತತ್ ಕ್ಷಣಾತ್॥ | ಈ ಸ್ತೋತ್ರದಿಂದ ಜಲಾಭಿ ಮಂತ್ರಣ ಮಾಡಿ ಪ್ರಾಶನ ಮಾಡಿದರೆ ಉದರ ಶೂಲೆಯು ವಿಳಂಬವಿಲ್ಲದಲೇ ಕಡಿಮೆ ಯಾಗುವದು |
| ೪ ಯದ್ ವೃಂದಾವನ ಮಾಸಾದ್ಯ ಪಂಗುಃ ಖಂಜೋಪಿ ವಾ ಜನಃ। ಸ್ತೋತ್ರೇಣಾನೇನ ಯಃಕುರ್ಯಾತ್ ಪ್ರದಕ್ಷಿಣ ನಮಸ್ಕೃತಿಃ॥ | ಗುರುರಾಜರ ವೃಂದಾವನ ಸಮೀಪಕ್ಕೆ ಹೋಗಿ ಕುಂಟರು ಸಾಮರ್ಥ್ಯವಿಲ್ಲದವರು ಈ ಸ್ತೋತ್ರವನ್ನು ಹೇಳಿದ ಮಾತ್ರದಿಂದ ನಡೆದುಕೊಂಡು ಹೋಗಲು ಸಮರ್ಥರಾದರು |
| ೫ ಸೋಮ ಸೂರ್ಯೋಪರಾಗೇಚ ಪುಷ್ಯಾರ್ಕಾದಿ ಸಮಾಗಮೇ॥ | ಸೂರ್ಯ ಚಂದ್ರ ಗ್ರಹಣ ಸಮಯದಲ್ಲಿ ಭಾನುವಾರ ಪುಷ್ಯಾನಕ್ಷತ್ರ ಬಂದಾಗ ಈ ಸ್ತೋತ್ರವನ್ನು ಪಠಣಮಾಡುವದರಿಂದ ಭೂತ ಪ್ರೇತ ಪಿಶಾಚಿ |

| | |
|---|---|
| | ಬಾಧೆಗಳು ದೂರವಾಗುತ್ತವೆ. |
| ೬ ಏತತ್ ಸ್ತೋತ್ರಂ ಸಮುಚ್ಚಾರ್ಯ ಗುರೋವೃಂದಾವನಾಂತಿಕೆ।<br>ದೀಪ ಸಂಯೋಜನಾತ್ ಜ್ಞಾನಂ ಪುತ್ರಲಾಭೋ ಭವೇತ್ ಧೃವಂ॥ | ಗುರುಗಳ ಬೃಂದಾವನ ಸನ್ನಿಧಿಯಲ್ಲಿ ಈ ಸ್ತೋತ್ರ ಪಠಣೆ ಮಾಡಿ ಘೃತದೀಪವನ್ನಿಡುವದರಿಂದ ಜ್ಞಾನ ಲಾಭ ಸತ್ಪುತ್ರ ಲಾಭ ಆಗುತ್ತದೆ |
| ೭ ಪರವಾದಿ ಜಯೋ ……<br>ಸರ್ವಾಭಿಷ್ಟಾರ್ಥ ಸಿದ್ಧಿ ….॥ | ಪರವಾದಿಗಳ ಸಂಗಡ ವಾದದಲ್ಲಿ ಜಯ ಲಭ್ಯವಾಗುತ್ತದೆ. ಸರ್ವಾಭಿಷ್ಟಾರ್ಥ ಸಿದ್ಧಿ ಯಾಗಿತ್ತದೆ |
| ೮ ರಾಜಚೋರ ಮಹಾವ್ಯಾಘ್ರ ಸರ್ವ ನಕ್ರಾದಿ ಪೀಡನಂ॥<br>ನಜಾಯತೆ ಏತತ್ ಸ್ತೋತ್ರ…..॥ | ಈ ಸ್ತೋತ್ರವನ್ನು ಪಠಿಸಿದರೆ ರಾಜಚೋರರ, ಹುಲಿಯ, ಸರ್ಪಗಳ, ಮೊಸಳೆಗಳ ಪೀಡೆಯು ಆಗುವದಿಲ್ಲ |
| ೯ ಯೋ ಭಕ್ತ್ಯಾಗುರು ರಾಘವೇಂದ್ರ ಚರಣದ್ವಂದ್ವಂ ಸ್ಮರನ್ ಯಃಪಠೇತ್ ಸ್ತೋತ್ರಂ ದಿವ್ಯಂಮಿದಂ ಸದಾ ನಹಿ ಭವೇತ್ ತಸ್ಯಾಽಸುಖಂ ಕಿಂಚನ।…..<br>ಸಾಕ್ಷೀಹಯಾಸ್ಯೋತ್ರ ಹಿ॥ | ಯಾರು ಈ ಗುರು ಸ್ತೋತ್ರವನ್ನು ಪೂರ್ವಕವಾಗಿ ಪಠಿಸುತ್ತಾರೆಯೋ ಅವರಿಗೆ ದುಃಖಾದಿಗಳು ಆಗುವದಿಲ್ಲ. ಆದರೆ ಸುಖವೇ ಆಗುತ್ತದೆ. ಕೀರ್ತಿ, ದಿಗ್ವಿಜಿತಾ, ಅತುಲವಾದ ವಿಭೂತಿ ಆಗಿಯೇ ಆಗುತ್ತದೆ. ದೃಢೀಕರಣಕ್ಕೆ "ಹಯಗ್ರೀವದೇವರು ಸಾಕ್ಷಿ" ಎಂದು ಬೃಂದಾವನದಿಂದ ಶ್ರೀ ರಾಯರ ಧ್ವನಿ ಪೂರಕವಾಯಿತು. |
| ೧೦ ಇತ್ಯಾದಿ….. | ಈ ಸ್ತೋತ್ರ ಪಠಣದಿಂದ ಅನೇಕ ಮಂಗಳಕರವಾದ ಫಲಗಳು ಲಭಿಸುವವು ಎಂಬ ಮಾತಿನಲ್ಲಿ ಸಂದೇಹವಿಲ್ಲ |

ಹೀಗೆ ಅವರ ಮಹಿಮೆ ಮತ್ತು ಅವರ ಸ್ತೋತ್ರ ಮಹಿಮೆ ಫಲ. ಶ್ರೀ ರಾಘವೇಂದ್ರ ಗುರುಗಳು ಭಕ್ತರ ಅನಿಷ್ಟಾ ನಿವೃತ್ತಿ ಮತ್ತು ಅಭೀಷ್ಟೆಗಳನ್ನು ನೆರವೇರಿಸುವದರಲ್ಲಿ ಶ್ರೀ ಹಯಗ್ರೀವದೇವರನ್ನೇ ಸಾಕ್ಷಿಯಾಗಿಟ್ಟುಕೊಂಡಿದ್ದಾರೆ. ಅವರು ಸಶರೀರ ಬೃಂದಾವನಸ್ಥರಾಗಿ ಮುನ್ನೂರಹದಿನಾರು ವರ್ಷಗಳಾದವು. ಅವರಲ್ಲಿ ಬರತಕ್ಕ ಭಕ್ತರ ಸಂಖ್ಯೆ ದಿನೇದಿನೇ ಅಭಿವೃದ್ಧಿಯಾಗುತ್ತಲೇ ಇದೆ. ಮಹೆಗಳಂತೂ ಅವರು ಇದ್ದಾಗಲೂ ಮಿತಿಯಿರಲಿಲ್ಲ ಆಮೇಲೂ ಲೆಖ್ಖವಿಲ್ಲದಷ್ಟು ಈಗಲೂ ನಡೆಯುತ್ತಿರುತ್ತವೆ. ಮಂತ್ರಾಲಯದಿಂದ ಮಹಿಮೆಗಳ ಒಂದು "ಗೆಝೆಟ್"ನ್ನೇ ಹೊರಡಿಸಬೇಕು. ಸಂಸಾರದಲ್ಲಿ ನೊಂದವರಿಗೆ ಬೆಂದವರಿಗೆ, ಸಮಸ್ಯೆ ಅಪರಿಹಾರ್ಯವಾದವರಿಗೆ, ಆಧ್ಯಾತ್ಮಮಾರ್ಗದಲ್ಲಿ ಅರಸತಕ್ಕವರಿಗೆ ಮತ್ತು ಇನ್ನೂ ಅನೇಕರಿಗೆ ಇವರದೊಂದು ದೊಡ್ಡ ಆಶ್ರಯ. ಪ್ರತಿಯೊಬ್ಬರ ಸಮಸ್ಯೆಗೂ ಒಂದು ಯೋಗ್ಯ ಪರಿಹಾರ ಒದಗಿಸುತ್ತಾರೆ. ಆದ್ದರಿಂದಲೇ ಶ್ರೀ ಅಪ್ಪಣಾಚಾರ್ಯರು ಗುರುಗಳನ್ನು **"ದಿವಿಜದ್ರು ಮೋಯಂ"** ಕಲಿಯುಗದ ಕಲ್ಪವೃಕ್ಷ ಎಂದು ಕೊಂಡಾಡಿದ್ದಾರೆ.

ಶ್ರೀ ಜಗನ್ನಾಥದಾಸರು "ಸುರಪಾನಾಲಯದಂತೆ ಮಂತ್ರಾಲಯ" ಎಂದು ಹಾಡಿದ್ದಾರೆ. ಯಾಕೆಂದರೆ ಗುರುಗಳು ಕಾಮಧೇನು ಮತ್ತು ಕಲ್ಪವೃಕ್ಷದಂತಿದ್ದಾರೆ "ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ". ಶ್ರೀ ಗುರು ಸಾರ್ವಭೌಮರು ಏಳುನೂರು ವರ್ಷ ಬೃಂದಾವನದಲ್ಲಿದ್ದು ಭಕ್ತರಿಗೆ ಅನುಗ್ರಹ ಮಾಡುವದಾಗಿ ಹೇಳಿದ್ದರಂತೆ. ಈಗಾಗಲೇ ಮುನ್ನೂರಹದಿನಾರು ವರ್ಷಗಳಾದವು. ಈ ಏಳುನೂರು ವರ್ಷಗಳು ಕಳೆದುಹೋದರು ನಮ್ಮ ಪುನರ್ಜನ್ಮ ತಪ್ಪಿದ್ದಲ್ಲ. ಮುಂದೆ ನಮ್ಮಗಳ ಗತಿ ಏನೆಂದು ಭಕ್ತಾದಿಗಳ ಕಾತರ. ಈಗ ಎರಡನೂರು ವರ್ಷಗಳ ಹಿಂದೆಯೇ ಶ್ರೀ ಪ್ರಾಣೇಶದಾಸರು ಕಲಿಕಾಲ ಬಲದಿಂದ ಸಂತಪ್ತರಾದ ಜನರನ್ನು ಉದ್ಧಾರಮಾಡಲು ಪುನಃ ಬನ್ನಿರಿ ಎಂದು ಪ್ರಾರ್ಥಿಸೊದ್ದಾರೆ.

"ಜನಮನ ತಣಿಸಲು। ಇನ್ನೊಮ್ಮೆ ಬಾ ಗುರುರಾಯ"॥

ಇದೇ ಪ್ರಾರ್ಥನೆಯನ್ನು ಪುನಃ ಮಾದುತ್ತಾ ಈ ಲೇಖನದ ಎರಡನೆಯ ಭಾಗವನ್ನೂ ಮತ್ತು ಲೇಖನವನ್ನೂ ಪೂರ್ಣಗೊಳಿಸುವ.

॥ಇತಿ ಶ್ರೀಮಧ್ವೇಶಾರ್ಪಣಮಸ್ತು॥